PRAJAVANI 17/02/2014 Page 2

# ವಿದ್ಯುತ್ ಸೇವೆ ಲೋಪವಾದರೆ ಅಧಿಕಾರಿಗೆ ದಂಡ

ವಿಶೇಷ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಸಮಸ್ಯೆಗಳ ಬಗ್ಗೆ ದೂರು ನೀಡಲು ಹಳ್ಳಿಯಲ್ಲಿರುವ ಗ್ರಾಹಕರು ವಿದ್ಯುತ್ ಕಂಪೆನಿಗಳ ಕೇಂದ್ರ ಕಚೇರಿಗೆ ಅಲೆದಾಡಬೇಕಿಲ್ಲ. ತಮ್ಮ ಜಿಲ್ಲೆಯಲ್ಲೇ ದೂರು ಸಲ್ಲಿಸಿ ಕಾಲಮಿತಿಯಲ್ಲಿ ಸಮಸ್ಯೆಯನ್ನು ಇತ್ಯರ್ಥಪಡಿಸಿಕೊಳ್ಳಬಹುದು.

ಗ್ರಾಹಕ ಸ್ನೇಹಿ ಕಾರ್ಯನಿರ್ವಹಣೆಗಾಗಿ ರಾಜ್ಯದ 30 ಜಿಲ್ಲೆಗಳಲ್ಲಿ ಇತ್ತೀಚೆಗೆ ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆಯನ್ನು ಆರಂಭಿಸಲಾಗಿದೆ. ಈ ವೇದಿಕೆ ಜಿಲ್ಲಾ ಮಟ್ಟದಲ್ಲಿ ಒಂಬುಡ್ಸ್‌ಮನ್ ಮಾದರಿಯಲ್ಲಿ ಕಾರ್ಯನಿರ್ವಹಿಸಲಿದೆ.

ರಾಜ್ಯದಲ್ಲಿ ಈ ವರೆಗೆ ಐದು ವೇದಿಕೆಗಳು ಕಾರ್ಯನಿರ್ವಹಿಸುತ್ತಿದ್ದವು. ಈ ವೇದಿಕೆಯ ಕಚೇರಿಗಳು ಎಸ್ಕಾಂಗಳ ಕೇಂದ್ರ ಕಚೇರಿಯಲ್ಲಿ ಇತ್ತು. ದೂರದ ಹರಿಹರದ ಗ್ರಾಹಕನೊಬ್ಬ ದೂರು ಇತ್ಯರ್ಥಕ್ಕಾಗಿ ಬೆಂಗಳೂರಿನ ಬೆಸ್ಕಾಂ ಕಚೇರಿಗೆ ಬರಬೇಕಿತ್ತು. ಹೀಗಾಗಿ ಹೆಚ್ಚಿನ ಸಂದರ್ಭಗಳಲ್ಲಿ ಗ್ರಾಹಕರು ದೂರು ಸಲ್ಲಿಸುತ್ತಲೇ ಇರಲಿಲ್ಲ. ಇನ್ನೊಂದೆಡೆ, ದೂರುಗಳ ಇತ್ಯರ್ಥದಲ್ಲೂ ಸಾಕಷ್ಟು ವಿಳಂಬವಾಗುತ್ತಿದೆ ಎಂದು ಗ್ರಾಹಕರು ದೂರಿದ್ದರು.

ಆದ್ದರಿಂದ ಪ್ರತಿ ಜಿಲ್ಲೆಯಲ್ಲೂ ವೇದಿಕೆಗಳನ್ನು ಆರಂಭಿಸಲು ಇಂಧನ ಇಲಾಖೆ ತೀರ್ಮಾನಿಸಿದೆ. ಪ್ರತಿ ಜಿಲ್ಲೆಗೆ ಮೂವರು ಸದಸ್ಯರಂತೆ ಈಗಾಗಲೇ 100 ಮಂದಿಯನ್ನು ಗುರುತಿಸಲಾಗಿದ್ದು, ಕಚೇರಿ ಕೂಡ ಆರಂಭಿಸಲಾಗಿದೆ.

**ವೇದಿಕೆಯ ಸ್ವರೂಪ:** ಆಯಾ ವಿದ್ಯುತ್ ಸರಬರಾಜು ಕಂಪೆನಿಯ ಸೂಪರಿಂಟೆಂಡಿಂಗ್ ಎಂಜಿನಿಯರ್ ವೇದಿಕೆಯ ಅಧ್ಯಕ್ಷರಾಗಿರುತ್ತಾರೆ. ಅವರ ಕಚೇರಿಯಲ್ಲೇ ವೇದಿಕೆ ಕಾರ್ಯನಿರ್ವಹಿಸಲಿದೆ. ಕಾರ್ಯನಿರ್ವಾಹಕ ಎಂಜಿನಿಯರ್ ಮತ್ತು ಕೆಇಆರ್‌ಸಿಯಿಂದ ನಾಮನಿರ್ದೇಶನ ಹೊಂದಿರುವ ವಿದ್ಯುತ್ ತಜ್ಞರೊಬ್ಬರು ಸದಸ್ಯರಾಗಿರುತ್ತಾರೆ. ಪ್ರತಿ 15 ದಿನಕ್ಕೊಮ್ಮೆ ವೇದಿಕೆ ಸಭೆ ಸೇರಿ ದೂರುಗಳ ವಿಲೇವಾರಿ ಮಾಡಲಿದೆ. 60 ದಿನಗಳಲ್ಲಿ ದೂರನ್ನು ಇತ್ಯರ್ಥ ಮಾಡಬೇಕು. ಪ್ರಕರಣ ಇತ್ಯರ್ಥ ಮಾಡದೆ ಇದ್ದಲ್ಲಿ ವೇದಿಕೆ ಕಾರಣವನ್ನು ನೀಡಬೇಕು. ಒಂದು ವೇಳೆ ವೇದಿಕೆಯ ತೀರ್ಪಿನಿಂದ ಬಳಕೆದಾರರಿಗೆ ತೃಪ್ತಿ ಆಗದಿದ್ದರೆ ವಿದ್ಯುತ್ ಒಂಬುಡ್ಸ್‌ಮನ್ ಅವರ ಮೊರೆ ಹೋಗಬಹುದು. ಆಗಲೂ ಸಮಾಧಾನ ಆಗದಿದ್ದರೆ ನ್ಯಾಯಾಲಯದ ಮೆಟ್ಟಿಲೇರಬಹುದು.

## ಯಾವುದಕ್ಕೆ ದಂಡ

- ಗ್ರಾಹಕರು ವಿದ್ಯುತ್ ಸಂಪರ್ಕಕ್ಕಾಗಿ ಸಲ್ಲಿಸಿದ ಅರ್ಜಿ ಸರಿಯಾಗಿದ್ದರೆ 30 ದಿನಗಳೊಳಗೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕು. ಇಲ್ಲದಿದ್ದರೆ ಬಳಿಕ ಪ್ರತಿದಿನ ಗ್ರಾಹಕರಿಗೆ ₹200 ದಂಡ ರೂಪದಲ್ಲಿ ಆ ಅಧಿಕಾರಿ ನೀಡಬೇಕು.
- ವಿದ್ಯುತ್ ತಂತಿ ತುಂಡಾಗಿದ್ದರೆ 6 ರಿಂದ 12 ಗಂಟೆಗಳಲ್ಲಿ ಸರಿಪಡಿಸಬೇಕು.
- ನಗರ ಪ್ರದೇಶದಲ್ಲಿ 24 ಗಂಟೆಗಳಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರ್ ದುರಸ್ತಿ ಮಾಡಬೇಕು. ಗ್ರಾಮೀಣ ಪ್ರದೇಶದಲ್ಲಿ 72 ಗಂಟೆಗಳಲ್ಲಿ ದುರಸ್ತಿ ಮಾಡಬೇಕು.
- ವೋಲ್ಟೇಜ್ ಹೆಚ್ಚೂ ಕಡಿಮೆಯಾದರೆ 7 ದಿನಗಳಲ್ಲಿ ಸರಿಪಡಿಸಬೇಕು.
- ಶುಲ್ಕ ಪಾವತಿಸಿದ 30 ದಿನಗಳ ಒಳಗೆ ಸಿಂಗಲ್ ಫೇಸ್‌ನಿಂದ ಮೂರು ಫೇಸ್‌ಗೆ ಪರಿವರ್ತಿಸಬೇಕು.
- ಬಾಕಿ ಉಳಿಸಿಕೊಂಡ ಕಾರಣಕ್ಕೆ ವಿದ್ಯುತ್ ಕಡಿತಗೊಳಿಸಿದ್ದರೆ ಹಣ ಪಾವತಿಸಿದ ದಿನವೇ ಮರುಸಂಪರ್ಕ ಕಲ್ಪಿಸಬೇಕು. ಪ್ರತಿದಿನದ ವಿಳಂಬಕ್ಕೆ ಗ್ರಾಹಕರಿಗೆ ₹50 ದಂಡ ಪಾವತಿಸಬೇಕು.

## ಗ್ರಾಹಕರು ಏನು ಮಾಡಬೇಕು

ಗ್ರಾಹಕರು ದೂರು ಸಲ್ಲಿಸಲು ಕಷ್ಟ ಪಡಬೇಕಿಲ್ಲ. ಸಮಸ್ಯೆ ಬಗ್ಗೆ ಚಿಕ್ಕದಾಗಿ ಬರೆದು ವೇದಿಕೆಗೆ ಸಲ್ಲಿಸಬಹುದು. ಗ್ರಾಹಕರು ವಕೀಲರನ್ನು ನೇಮಿಸಿಕೊಳ್ಳುವ ಅಗತ್ಯ ಇಲ್ಲ.

'2003ರ ವಿದ್ಯುತ್ ಕಾಯ್ದೆಯ ಮಾರ್ಗಸೂಚಿ ಪ್ರಕಾರವೇ ವೇದಿಕೆ ಕಾರ್ಯನಿರ್ವಹಿಸಬೇಕು. ದೋಷಪೂರಿತ ಸೇವೆಗೆ 14 ಬಗೆಯ ಪ್ರಕರಣಗಳಲ್ಲಿ ಅಧಿಕಾರಿಗಳಿಂದ ದಂಡ ವಸೂಲಿಗೆ ಅವಕಾಶ ಇದೆ. ಅಧಿಕಾರಿಗಳು ನಿಗದಿತ ಅವಧಿಯಲ್ಲಿ ಸೇವೆ ಒದಗಿಸದೆ ಇದ್ದಲ್ಲಿ ದೂರು ಸಲ್ಲಿಸಬಹುದು. ಕನಿಷ್ಠ ₹50 ರಿಂದ ಗರಿಷ್ಠ ₹200 ವರೆಗೆ ದಂಡ ವಸೂಲಿ ಮಾಡಲಾಗುತ್ತದೆ' ಎನ್ನುತ್ತಾರೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (ಕೆಇಆರ್‌ಸಿ) ಅಧ್ಯಕ್ಷ ಎಂ.ಆರ್.ಶ್ರೀನಿವಾಸಮೂರ್ತಿ.

---

17/2/14

# 'ನಮ್ಮ ಮೆಟ್ರೊ'ಗೆ ಸುರಕ್ಷತೆಯ ಪ್ರಮಾಣಪತ್ರ

## ಮಾಸಾಂತ್ಯಕ್ಕೆ ಸಂಪಿಗೆ ರಸ್ತೆ-ಪೀಣ್ಯಾ ಹಳಿಗೆ ರೈಲು

**ಬೆಂಗಳೂರು, ಫೆ. 16:** ಉತ್ತರ ಬೆಂಗಳೂರಿಗರ ಬಹುದಿನದ ಮೆಟ್ರೋರೈಲಿನ ಕನಸು ನನಸಾಗುವ ಕಾಲ ಕೂಡಿಬಂದಿದೆ. ಸಂಪಿಗೆ ರಸ್ತೆಯಿಂದ ಪೀಣ್ಯಾ ಕೈಗಾರಿಕಾ ಪ್ರದೇಶಕ್ಕೆ ಸಂಪರ್ಕ ಜಾಲ ಕಲ್ಪಿಸುವ ನಮ್ಮ ಮೆಟ್ರೋದ ಗ್ರೀನ್‌ಲೈನ್ ರೈಲಿಗೆ ಕೇಂದ್ರ ರೈಲ್ವೇ ಸುರಕ್ಷತಾ ಪ್ರಮಾಣಪತ್ರ ಶೀಘ್ರ ಸಿಗಲಿದೆ. ಈಗಾಗಲೇ ಈ ಮಾರ್ಗದ ಸಮೀಕ್ಷೆ ನಡೆಸಿರುವ 10 ಮಂದಿಯ ತಂಡ ಎಲ್ಲ ವ್ಯವಸ್ಥೆಗಳ ಬಗ್ಗೆ ಸಂತೃಪ್ತಿ ವ್ಯಕ್ತಪಡಿಸಿದೆ ಎಂದು ಮೆಟ್ರೋ ಮೂಲಗಳು ತಿಳಿಸಿವೆ.



### ವ್ಯವಸ್ಥೆಗಳ ಪ್ರಶಂಸೆ

ಸಂಪಿಗೆ ರಸ್ತೆ-ಪೀಣ್ಯಾ ಸಂಪರ್ಕದ 9.9 ಕಿಮೀ ದೂರಕ್ಕೆ ಮೆಟ್ರೋ ರೈಲು ಸೇವೆ ಒದಗಬೇಕೆಂಬುದು ಬಹುದಿನಗಳ ಕನಸು. ಈಗಾಗಲೇ ಎಂ.ಜಿ.ರಸ್ತೆ -ಬೈಯ್ಯಪ್ಪನಹಳ್ಳಿ ನಡುವೆ ನೇರಳೆ(ಪರ್ಪಲ್) ಬಣ್ಣದ ಮೆಟ್ರೋರೈಲು ಕಳೆದೆರಡು ವರ್ಷಗಳಿಂದ ಯಶಸ್ವಿ ಸಂಚಾರ ನಡೆಸಿದೆ. ಉತ್ತರ ಬೆಂಗಳೂರಿಗೆ ಹಸಿರು ಮೆಟ್ರೋ ರೈಲು ಓಡಿಸುವ ಯೋಜನೆ ಹಾಕಿಕೊಳ್ಳಲಾಗಿದ್ದು ಬಿಎಂಆರ್‌ಸಿಎಲ್ ಈ ಮಾರ್ಗದಲ್ಲಿ ತೆಗೆದುಕೊಂಡಿರುವ ಎಲ್ಲ ಮುಂಜಾಗ್ರತಾ ಕ್ರಮಗಳು, ಸಿಗ್ನಲ್ ವ್ಯವಸ್ಥೆ, ನಿಲ್ದಾಣಗಳಲ್ಲಿನ ಸೌಲಭ್ಯ ಮತ್ತು ಭದ್ರತೆ ಬಗ್ಗೆ ಸುರಕ್ಷತಾ ಪರಿಶೀಲನಾ ತಂಡ ಸಹಮತ ಸೂಚಿಸಿದೆ. ಹಾಗಾಗಿ ನೂತನ ಮಾರ್ಗ ರೈಲುಸೇವೆ ಕಾಣುವ ದಿನಗಳು ಸನ್ನಿಹಿತವಾಗಿವೆ.

### ವೇಗದ ಮಿತಿಗೆ ಸೂಚನೆ

4 ದಿನಗಳ ಕಾಲ ಈ ಮಾರ್ಗದಲ್ಲಿ ಕೂಲಂಕಷ ಪರಿಶೀಲನೆ ನಡೆಸಿದ ತಂಡ ಒಂದು ತೀವ್ರ ತಿರುವು ಇರುವ ಸ್ಥಳದಲ್ಲಿ ನಿಯಮಿತ ವೇಗ ಕಾಪಾಡಿಕೊಳ್ಳಲು ಸಲಹೆ ನೀಡಿದೆ. ಜೊತೆಗೆ ಈ ಅಂಶವನ್ನು ಒಳಗೊಂಡಂತೆ ಎಲ್ಲ ಮಾಹಿತಿಗಳನ್ನೂ ಕೇಂದ್ರ ರೈಲ್ವೇ ಸುರಕ್ಷತಾ ಮಂಡಳಿಗೆ ಸಲ್ಲಿಕೆಯಾಗಲಿದ್ದು ಅಲ್ಲಿಂದ ಯಾವುದೇ ಕ್ಷಣದಲ್ಲಾದರೂ ಸಾರ್ವಜನಿಕ ಬಳಕೆಗೆ ಹಸಿರು ನಿಶಾನೆ ಸಿಗಲಿದೆ ಎನ್ನುವ ವಿಶ್ವಾಸವನ್ನು ಮೆಟ್ರೋ ನಿಗಮದ ವ್ಯವಸ್ಥಾಪಕ ನಿರ್ದೇಶಕ ಪಿ.ಸಿ.ಖರೋಲ ವ್ಯಕ್ತಪಡಿಸಿದ್ದಾರೆ. ಇದೇ ವೇಳೆ ವೇಗದ ಮಿತಿಯನ್ನು 60-80 ಕಿಮೀಗೆ ಹೆಚ್ಚಿಸುವಂತೆ ಬಿಎಂಆರ್‌ಸಿಎಲ್ ಕೋರಿದೆ. ಆದರೆ ಇದಕ್ಕೆ ಸುರಕ್ಷತಾ ತಂಡ ಯಾವ ರೀತಿ ಪ್ರತಿಕ್ರಿಯಿಸಲಿದೆ ಎನ್ನುವುದು ಕುತೂಹಲಕ್ಕೆ ಕಾರಣವಾಗಿದೆ.

ತಾಂತ್ರಿಕ ಪರಿಶೀಲನೆ ಅಂತಿಮ ಹಂತ ತಲುಪುತ್ತಲೇ ಇತ್ತ ಬಿಎಂಆರ್‌ಸಿಎಲ್ ಕೂಡಾ ಈ ಮಾರ್ಗದ ದರ ನಿಗದಿಗೆ ಮುಂದಾಗಿದೆ. ವಿದ್ಯುತ್‌ದರ ಹಾಗೂ ನಿರ್ವಹಣಾ ವೆಚ್ಚವನ್ನು ಗಮನದಲ್ಲಿರಿಸಿ ಪ್ರಯಾಣ ದರ ನಿಗದಿಯಾಗಲಿದೆ.

ಬಲ್ಲ ಮೂಲಗಳ ಮಾಹಿತಿಯಂತೆ ಈ ಹಿಂದಿನ ಎಂ.ಜಿ.ರಸ್ತೆ- ಬೈಯ್ಯಪ್ಪನಹಳ್ಳಿ ನಡುವಿನ ಮಾರ್ಗದ ದರ ಹೆಚ್ಚಳಕ್ಕೆ ಇನ್ನೂ ಸರ್ಕಾರದ ಗ್ರೀನ್‌ಸಿಗ್ನಲ್ ಸಿಗದಿರುವ ಹಿನ್ನೆಲೆಯಲ್ಲಿ ನೂತನ ಮಾರ್ಗಕ್ಕೆ ಅಲ್ಪಮಟ್ಟಿಗೆ ಹೆಚ್ಚಿನ ದರ ಹೇರಿಕೆಯಾಗುವ ಸಾಧ್ಯತೆಯಿದೆ. 9.9 ಕಿಮೀ ದೂರಕ್ಕೆ ಕನಿಷ್ಠ 25 ರೂಪಾಯಿ ನಿಗದಿ ಪ್ರಯತ್ನ ನಡೆದಿದ್ದು ಸರ್ಕಾರದ ಒಪ್ಪಿಗೆಗೆ ನಿಗಮ ಪ್ರಸ್ತಾವನೆ ರವಾನಿಸಿದೆ. ಎಲ್ಲವೂ ನಿರೀಕ್ಷೆಯಂತೆ ನಡೆದಲ್ಲಿ ಫೆಬ್ರವರಿ ಅಂತ್ಯಕ್ಕೆ ಸಂಪಿಗೆರಸ್ತೆ-ಪೀಣ್ಯಾ ನಡುವೆ ಹಸಿರುಮೆಟ್ರೋ ರೈಲು ಸಂಚಾರ ಖಚಿತ.

Udayvani 17/02/2014 pg no. 06

# ಜನರಿಗಿಂತ ಮೊದಲೇ ಇಂಧನ ಇಲಾಖೆಗೆ ಶಾಕ್!

## ■ ವಿದ್ಯುತ್ ಲಭ್ಯವಿಲ್ಲದಿದ್ದರೂ ಲೋಡ್ ಶೆಡ್ಡಿಂಗ್ ಮಾಡದಿರಲು ಸಚಿವರ ಆದೇಶ ■ ಅಧಿಕಾರಿಗಳಿಗೆ ಚಿಂತೆ

■ ವಿಜಯಕುಮಾರ್ ಚಂದರಗಿ

ಬೆಂಗಳೂರು: 'ನಗರವಾಗಲಿ ಅಥವಾ ಗ್ರಾಮೀಣ ಪ್ರದೇಶವಾಗಲಿ ಯಾವುದೇ ಕಾರಣಕ್ಕೂ ಲೋಡ್ ಶೆಡ್ಡಿಂಗ್ ಮಾಡಕೂಡದು. ಅಷ್ಟೇ ಅಲ್ಲ, ರೈತರಿಗೆ ಇನ್ನೂ ಎರಡು ತಾಸು ಹೆಚ್ಚು ವಿದ್ಯುತ್ ಪೂರೈಸಬೇಕು.'

ಲೋಕಸಭಾ ಚುನಾವಣೆ ಹೊಸ್ತಿಲಲ್ಲಿ ಇಂಧನ ಸಚಿವ ಡಿ.ಕೆ.ಶಿವಕುಮಾರ್ ಹೊರಡಿಸಿದ ಈ 'ಅಲಿಖಿತ ಫರ್ಮಾನು' ಇಂಧನ ಇಲಾಖೆಗೆ ಶಾಕ್ ನೀಡಿದಂತಾಗಿದೆ.

ಬೇಸಿಗೆಯ ಸಂದಿಗ್ಧತೆಯಲ್ಲೂ ಹೊರಡಿಸಿರುವ ಈ ಫರ್ಮಾನಿನ ಹಿಂದೆ ಚುನಾವಣೆ ಗಿಮಿಕ್ ಅಡಗಿದ್ದು, ಇದರಿಂದ ರಾಜ್ಯದಲ್ಲಿ ಕನಿಷ್ಠ ಇನ್ನೂ 6ರಿಂದ 8 ದಶಲಕ್ಷ ಯೂನಿಟ್ ಹೆಚ್ಚುವರಿ ವಿದ್ಯುತ್ ಅವಶ್ಯಕತೆ ಇದೆ ಎಂದು ಇಂಧನ ಇಲಾಖೆ ಲೆಕ್ಕಹಾಕಿದೆ. ಬೇಸಿಗೆಯಲ್ಲಿ ಬೇಡಿಕೆ ಪ್ರಮಾಣ ಶೇ.20ರಷ್ಟು ಹೆಚ್ಚಳವಾಗಲಿದೆ ಎಂದು ಅಂದಾಜು ಮಾಡಲಾಗಿದ್ದು, ವಿಚಿತ್ರವೆಂದರೆ ಈಗಾಗಲೇ ಬೇಡಿಕೆ ಪ್ರಮಾಣ ಕಳೆದ ಐದು ವರ್ಷಗಳಲ್ಲಿ ದಾಖಲೆ ಮಟ್ಟ ಅಂದರೆ 191 ದಶಲಕ್ಷ ಯೂನಿಟ್ ತಲುಪಿದೆ.

ಪರಿಸ್ಥಿತಿ ಹೀಗಿರುವಾಗಲೇ ಸಚಿವರು ಹೆಚ್ಚುವರಿ ವಿದ್ಯುತ್ ಪೂರೈಸಲು ಸೂಚಿಸಿದ್ದಾರೆ. ಆದೇಶ ಪಾಲನೆಗೆ ಇಲಾಖೆ ಮುಂದಿರುವ ಆಯ್ಕೆಗಳೆಂದರೆ- ಒಂದು, ವಿದ್ಯುತ್ ಖರೀದಿ. ಮತ್ತೊಂದು, ಕೆಲವರನ್ನು ಕತ್ತಲಲ್ಲಿಟ್ಟು, ಉಳಿದವರಿಗೆ ವಿದ್ಯುತ್ ಕೊಡುವುದು!

ಚುನಾವಣೆ ಮುಂದಿದ್ದು, ಸರ್ಕಾರಕ್ಕೆ ಇದು ಪ್ರತಿಷ್ಠೆಯಾಗಿದೆ. ಹಾಗಾಗಿ ಇಲಾಖೆ ಲೋಡ್ ಶೆಡ್ಡಿಂಗ್ ಸಾಹಸಕ್ಕಂತೂ ಕೈಹಾಕುವುದಿಲ್ಲ, ಅದಕ್ಕಾಗಿ ವಿದ್ಯುತ್ ಖರೀದಿಗೆ ಚಿಂತನೆ ನಡೆದಿದೆ ಎಂದು ಉನ್ನತ ಮೂಲಗಳು ತಿಳಿಸುತ್ತವೆ. ಆದರೆ, ಎಷ್ಟು ಖರೀದಿಸಬೇಕು? ಇದರಿಂದಾಗುವ ಆರ್ಥಿಕ ಹೊರೆ ಎಷ್ಟು ಎಂಬುದರ ಅಂದಾಜು ಇನ್ನೂ ಮಾಡಿಲ್ಲ. ಅಲ್ಪಾವಧಿ ಖರೀದಿ ಮಾಡುವುದಂತೂ ಖಚಿತ ಎಂದು ಮೂಲಗಳು ದೃಢಪಡಿಸಿವೆ.

■ ಸದ್ಯದ ಬೇಡಿಕೆ

**191**

ದಶಲಕ್ಷ ಯೂನಿಟ್

■ ಬೇಸಿಗೆಯ ಬೇಡಿಕೆ

**200**

ದಶಲಕ್ಷ ಯೂನಿಟ್

■ ರಾಜ್ಯದ ಉತ್ಪಾದನೆ

**165**

ದಶಲಕ್ಷ ಯೂನಿಟ್



### ಕೊಡೋ ಕರೆಂಟ್ ಸರಿಯಾಗಿ ಕೊಡಿ

ಗ್ರಾಮೀಣ ಪ್ರದೇಶಗಳಲ್ಲಿ ಸದ್ಯ ಆರು ತಾಸು ತ್ರಿಫೇಸ್ ನೀಡಲಾಗುತ್ತಿದ್ದು, ಇನ್ನೂ ಎರಡು ತಾಸು ವಿಸ್ತರಣೆಗೆ ಸಚಿವರು ಸೂಚಿಸಿದ್ದಾರೆ. ವಿಚಿತ್ರವೆಂದರೆ ಪ್ರಸ್ತುತ ಪೂರೈಕೆಯಾಗುತ್ತಿರುವ ವಿದ್ಯುತ್ತನ್ನೇ ಸಮರ್ಪಕವಾಗಿ ಪೂರೈಸಲಾಗುತ್ತಿಲ್ಲ ಎಂಬ ಆರೋಪವೂ ಕೇಳಿಬರುತ್ತಿದೆ.

ಪೂರಕವೆಂಬಂತೆ ವಿದ್ಯುತ್ ಬಳಕೆ ಮತ್ತು ಬೇಡಿಕೆ ಹಾಗೂ ಮುಂದಿನ ದಿನಗಳಲ್ಲಿ ಎಷ್ಟು ಬೇಡಿಕೆ ಬರಬಹುದು ಎಂಬುದರ ಕುರಿತು ಯೋಜನೆ ರೂಪಿಸುವಂತೆ ಎಲ್ಲ ವಿದ್ಯುತ್ ಸರಬರಾಜು ಕಂಪನಿ (ಎಸ್ಕಾಂ)ಗಳ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಲಾಗಿದೆ ಎಂದು ಪ್ರಧಾನ ಕಾರ್ಯದರ್ಶಿ ಅಮಿತಾ ಪ್ರಸಾದ್ ಅವರು ಈಚೆಗೆ ಕಾರ್ಯಕ್ರಮವೊಂದರಲ್ಲಿ ಸುದ್ದಿಗಾರರಿಗೆ ತಿಳಿಸಿದ್ದರು. ಇಂತಹದ್ದೊಂದು ಸೂಚನೆ ಬಂದಿದ್ದು, ಲೆಕ್ಕಾಚಾರ ಹಾಕಲಾಗುತ್ತಿದೆ ಎಂದೂ ವಿವಿಧ ಎಸ್ಕಾಂಗಳ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಸದ್ಯ ವಿದ್ಯುತ್ ಬೇಡಿಕೆ 191 ದಶಲಕ್ಷ ಯೂನಿಟ್ ಇದೆ. ಬೇಸಿಗೆಯಲ್ಲಿ ಇದರ ಪ್ರಮಾಣ 200 ದಶಲಕ್ಷ ಯೂನಿಟ್ ದಾಟುವುದು ಖಚಿತ. ಈ ಮಧ್ಯೆ ರೈತರಿಗೆ ಇನ್ನೂ ಎರಡು ತಾಸು 'ತ್ರಿಫೇಸ್' ವಿದ್ಯುತ್‌ನಿಂದ ಹೆಚ್ಚುವರಿ ಸುಮಾರು 8 ದಶಲಕ್ಷ ಯೂನಿಟ್ ಬೇಕಾಗುತ್ತದೆ. ಈ ಭಾರೀ ಬೇಡಿಕೆ ಹಿನ್ನೆಲೆಯಲ್ಲಿ ಉಷ್ಣ ಮತ್ತು ಜಲ ವಿದ್ಯುತ್ ಉತ್ಪಾದನಾ ಘಟಕಗಳಲ್ಲಿ ಗರಿಷ್ಠ ಉತ್ಪಾದನೆಗೆ ಸೂಚಿಸಲಾಗಿದೆ.

ಶರಾವತಿ ಪವರ್ ಪ್ರಾಜೆಕ್ಟ್, ವಾರಾಹಿ, ಗೇರುಸೊಪ್ಪ, ಮಹಾತ್ಮಗಾಂಧಿ ವಿದ್ಯುತ್ ಘಟಕ, ಲಿಂಗನಮಕ್ಕಿ ಜಲ ವಿದ್ಯುತ್ ಉತ್ಪಾದನಾ ಘಟಕಗಳಿಂದ (ಫೆ. 6ಕ್ಕೆ) 29.85 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸಲಾಗುತ್ತಿದ್ದು, ರಾಯಚೂರು ಉಷ್ಣ ವಿದ್ಯುತ್ ಸ್ಥಾವರದಿಂದ 29.98, ಬಳ್ಳಾರಿ ಉಷ್ಣ ವಿದ್ಯುತ್ ಸ್ಥಾವರದಿಂದ 15.39 ಹಾಗೂ ಉಡುಪಿ ಉಷ್ಣ ವಿದ್ಯುತ್ ಸ್ಥಾವರದಿಂದ 22.81 ದಶಲಕ್ಷ ಯೂನಿಟ್ ಉತ್ಪಾದಿಸಲಾಗುತ್ತಿದೆ. ವಿವಿಧ ಮೂಲಗಳಿಂದ ಉಳಿದ ವಿದ್ಯುತ್ ಪೂರೈಕೆಯಾಗುತ್ತಿದೆ.

ಶರಾವತಿ ವಿದ್ಯುದಾಗಾರದಲ್ಲಿ ಗರಿಷ್ಠ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಈಗ ಸರಾಸರಿ 25 ದಶಲಕ್ಷ ಯೂನಿಟ್ ಉತ್ಪಾದನೆಯಾಗುತ್ತಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 20 ದಶಲಕ್ಷ ಯೂನಿಟ್ ಉತ್ಪಾದಿಸಲಾಗುತ್ತಿತ್ತು ಎಂದು ಪ್ರಾಜೆಕ್ಟ್‌ನ ಮುಖ್ಯ ಎಂಜಿನಿಯರ್ (ಎಲೆಕ್ಟ್ರಿಕಲ್) ಹನುಮಂತಪ್ಪ ತಿಳಿಸಿದ್ದಾರೆ. ಅದೇ ರೀತಿ, ಆರ್‌ಟಿಪಿಎಸ್‌ನಲ್ಲಿ ಕೂಡ ಗರಿಷ್ಠ ಪ್ರಮಾಣದ ವಿದ್ಯುತ್ ಉತ್ಪಾದನೆ ಮಾಡುವಂತೆ ಸೂಚನೆ ಬಂದಿದೆ. ಅದರಂತೆ ಇಲ್ಲಿಂದ ಸರಾಸರಿ 25 ದಶಲಕ್ಷ ಯೂನಿಟ್ ವಿದ್ಯುತ್ ಪೂರೈಸಲಾಗುತ್ತಿದೆ ಎಂದು ಅಲ್ಲಿನ ನಿರ್ವಹಣಾ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಸಚಿವರ ಈ ಫರ್ಮಾನಿನಲ್ಲಿ ಹೊಸದೇನೂ ಇಲ್ಲ, ಚುನಾವಣೆ ಹಿನ್ನೆಲೆಯಲ್ಲಿ ಹೀಗೆ ಹೇಳಿದ್ದಾರೆ ಎಂದೂ ಹೇಳುವಂತಿಲ್ಲ, ಆರೆಂಟು ದಶಲಕ್ಷ ಯೂನಿಟ್ ಹೊರೆಯಾಗಲಿರುವ ವಿದ್ಯುತ್ತನ್ನು ನಿರಾಯಾಸವಾಗಿ ನಿರ್ವಹಿಸಬಹುದು.

ಉದಾಹರಣೆಗೆ ದಿನಕ್ಕೆ 6 ತಾಸು 'ತ್ರಿಫೇಸ್' ಕೊಡುವುದಾದರೆ, ರಾಜ್ಯವನ್ನು ನಾಲ್ಕು ಭಾಗಗಳನ್ನಾಗಿ ಮಾಡಿಕೊಂಡು ವಿತರಿಸಬಹುದು. ಆಗ, ನಮಗೆ ಒಂದು 'ಪೀಕ್ ಅವರ್' ಎದುರಾಗಬಹುದು. ಅದು ಸಮಸ್ಯೆಯೇ ಆಗದು ಎಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ (ಕೆಪಿಟಿಸಿಎಲ್) ವ್ಯವಸ್ಥಾಪಕ ನಿರ್ದೇಶಕ ಕುಮಾರ ನಾಯಕ್ ವಿಶ್ವಾಸ ವ್ಯಕ್ತಪಡಿಸುತ್ತಾರೆ.